## ಎಲ್ಲ ಕಾಲದೊಳು ಎಲ್ಲಾ ವೇಳೆಯೊಳು

ಎಲ್ಲ ಕಾಲದೊಳು ಎಲ್ಲಾ ವೇಳೆಯೊಳು
ದೇವರೇ ನಿನ್ನನ್ನೇ ಸ್ತುತಿಪೆ
ರಕ್ಷಕಾ ನಿನ್ನನ್ನೇ ಸ್ತುತಿಪೆ ಸ್ತುತಿಪೆ
ಎಲ್ಲಾ ವೇಳೆಯೊಳು ಸ್ತುತಿಪೆ

ಆದಿಯು ನೀನೇ ಅಂತ್ಯವು ನೀನೇ
ಜ್ಯೋತಿಯು ನೀನೇ ನನ್ನ ಭಾಗ್ಯವು ನೀನೇ

ತಂದೆಯು ನೀನೇ ತಾಯಿಯು ನೀನೇ
ತಾರಕ ನೀನೇ ನನ್ನ ಆಶ್ರಯ ನೀನೇ

ಮಾರ್ಗವು ನೀನೇ ಸತ್ಯವು ನೀನೇ
ಜೀವವು ನೀನೇ ನಂಬಿಗಸ್ತನು ನೀನೇ

ಸಹಾಯವು ನೀನೇ ಸಂತೋಷವು ನೀನೇ
ಶಾಂತಿಯು ನೀನೇ ವಿಶ್ರಾಂತಿಯು ನೀನೇ